DRDO and ISRO ಅವರೆಲ್ಲಾ ಅಭಿವೃದ್ಧಿ ಮಾಡಿ, 50% ಷೇರ್‌ನಲ್ಲಿ ಕೊಡುತ್ತೇವೆಂದು ಹೇಳಿದ್ದರು, ಈಗ ಅವರು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಚೆಳ್ಳಕೆರೆ ಪಟ್ಟಣದಲ್ಲಿ ವಾಹನ ದಟ್ಟನೆ ಬಹಳವಿದೆ, ಜೇವರ್ಗಿ–ಶ್ರೀರಂಗಪಟ್ಟಣ National Highway ರಸ್ತೆ recent ಆಗಿ upgrade ಆಗಿರುವುದರಿಂದ ಈಗ ಅದಕ್ಕೆ ನಾವು feasibility study ಮಾಡಿಸಿ, ಅದಕ್ಕೆ agency fix ಮಾಡಿ ಟೆಂಡರ್ ಕರೆದಿದ್ದೇವೆ. ಅದಕ್ಕೆ ಪರ್ಯಾಯವಾಗಿ National Highway ಮಾಡಿ ಸರ್ವೆ ಮಾಡಿ, ಆ Feasibility Certificate ಬಂದ ಮೇಲೆ, ಅದರಲ್ಲಿ by pass ರಸ್ತೆ ಮಾಡಿ ಅದಕ್ಕೆ ಅನುಕೂಲ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಬಿ. ಪ್ರಸನ್ನ ಕುಮಾರ್: ಮಾನ್ಯ ಅಧ್ಯಕ್ಷರೆ, ಬೈ ಪಾಸ್ ಬಹಳ ಬೇಗ ಆಗಬೇಕು.

ಡಾ: ಹೆಚ್. ಸಿ. ಮಹಾದೇವಪ್ಪ: National Highway ಗೆ upgrade ಆಗಿದೆ. ಅದಕ್ಕೆ ಟೆಂಡರ್ ಕರೆದಿದ್ದೇವೆ, ಏಜೆನ್ಸಿ ಫಿಕ್ಸ್ ಮಾಡಿದ್ದೇವೆ. ಅದರ Detailed Project Report ಬಂದಾಗ we will see that it is included and we will provide by pass.

ಶ್ರೀ ಬಿ. ಪ್ರಸನ್ನ ಕುಮಾರ್: ಊರಿನ ಮಧ್ಯೆ ಈ ರಸ್ತೆ ಪಾಸಾಗಿರುವುದರಿಂದ ತುಂಬಾ ಅಪಘಾತಗಳಾಗುತ್ತಿವೆ. ಆದಷ್ಟು ಬೇಗ ಮಾಡಿಸಬೇಕು.

ಅಧ್ಯಕ್ಷರು: ವಸಂತ ಬಂಗೇರ ಇಲ್ಲ, ಶಾರದಾ ಪೂರ್ಯನಾಯಕ್ ಇಲ್ಲ, ಮಾನಪ್ಪ ವಜ್ಜಲ್‌ರವರ ಪ್ರಶ್ನೆ ವರ್ಗಾವಣೆಯಾಗಿದೆ. ಮಹೇಶ್ ಎಸ್. ಆರ್. ಇಲ್ಲ, ಸುಧಾಕರ್

ರೈತರ ಭಾಗ್ಯಜ್ಯೋತಿ, ಕುಟೀರಜ್ಯೋತಿಗೆ ಆದ ವೆಚ್ಚ

218 (3068); ಡಾ: ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರೈತರಿಗೆ ಭಾಗ್ಯಜ್ಯೋತಿ/ಕುಟೀರ್‌ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡಲು ಎಷ್ಟು ಮೊತ್ತವನ್ನು ಸಹಾಯಧನ ರೂಪದಲ್ಲಿ ನೀಡಲಾಗು

ತ್ತಿದೆ; ಕಳೆದ ಮೂರು ವರ್ಷದಲ್ಲಿ ನೀಡಿದ ವಿದ್ಯುತ್‌ನ ವರ್ಷವಾರು ವಿವರ ನೀಡುವುದು;

ಆ) ಎಷ್ಟು ರೈತರಿಗೆ ಈ ಸೌಲಭ್ಯದ ಲಾಭ ಸಿಗುತ್ತಿದೆ; ಇದರ ಆಯ್ಕೆ ಮಾನದಂಡ ಏನು;

ಇ) ಆರ್ಥಿಕ ಸ್ಥಿತಿವಂತರೂ ಕೆಲವೆಡೆ ಈ ಸೌಲಭ್ಯ ಪಡೆದಿದ್ದಾರೆ ಎನ್ನುವ ಆರೋಪ ಇದೆ, ಸರ್ಕಾರಕ್ಕೆ ಈ ಕುರಿತು ಯಾವುದಾದರೂ ದೂರು ಬಂದಿದೆಯೇ; ಬಂದಿದ್ದರೆ ವಿಚಾರಣೆ ನಡೆದಿದೆಯೇ; ಯಾರನ್ನಾದರೂ ಶಿಕ್ಷೆಗೆ ಒಳಪಡಿಸಲಾಗಿದೆಯೇ;

ಈ) ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಪಂಪ್‌ಸೆಟ್ ವಿತರಿಸುವ ಯೋಜನೆ ಯಾವ ಹಂತದಲ್ಲಿದೆ, ಎಷ್ಟು ರೈತರಿಗೆ ಇದರ ಲಾಭ ಸಿಗಲಿದೆ;

ಉ) 2013–14ನೇ ಸಾಲಿನಲ್ಲಿ ಎಷ್ಟು ರೈತರಿಗೆ ಪಂಪ್‌ಸೆಟ್ ವಿತರಣೆ ಮಾಡ ಲಾಗಿದೆ; 2014–15ನೇ ಸಾಲಿಗೆ ಹಮ್ಮಿಕೊಂಡಿರುವ ವಿತರಣೆಯ ಗುರಿ ಎಷ್ಟು;

ಊ) ಈ ಎರಡೂ ಕಾರ್ಯಕ್ರಮದಿಂದಾಗಿ ವಾರ್ಷಿಕವಾಗಿ ಸರ್ಕಾರಕ್ಕೆ ಹೆಚ್ಚು ವರಿ ಆರ್ಥಿಕ ಹೊರೆ ಎಷ್ಟು ಬೀಳುತ್ತಿದೆ;

ಶ್ರೀ ಡಿ. ಕೆ. ಶಿವಕುಮಾರ (ಇಂಧನ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ರೈತರೂ ಸೇರಿದಂತೆ ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ಸರಬರಾಜಿಗಾಗಿ ಸರ್ಕಾರ ದಿಂದ ನೀಡಲಾದ ಸಹಾಯಧನ ಹಾಗೂ ಬಳಕೆಯಾದ ವಿದ್ಯುತ್‌ನ ಪ್ರಮಾಣದ ವಿವರಗಳು ಕೆಳಗಿನಂತಿವೆ.

ವರ್ಷ	ಸರ್ಕಾರದಿಂದ ನೀಡಲಾದ ಸಹಾಯಧನ (ರೂ. ಕೋಟಿಗಳಲ್ಲಿ)	ಬಳಕೆಯಾದ ವಿದ್ಯುತ್ (ದಶಲಕ್ಷ ಯೂನಿಟ್‌ಗಳಲ್ಲಿ)
2011–12	166.07	310.65
2012–13	141.05	326.34
2013–14	124.42	344.68

ಆ) ಕಳೆದ ಮೂರು ವರ್ಷಗಳಲ್ಲಿ ರೈತರೂ ಸೇರಿದಂತೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿದೆ.

ವರ್ಷ	ರೈತರೂ ಸೇರಿದಂತೆ ಭಾಗ್ಯಜ್ಯೋತಿ / ಕುಟೀರಜ್ಯೋತಿ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿದೆ.
2011–12	22,91,447,
2012–13	24,28,078
2013–14	24,17,088

ಭಾಗ್ಯಜ್ಯೋತಿ / ಕುಟೀರಜ್ಯೋತಿ ಯೋಜನೆಯ ಫಲಾನುಭವಿಗಳನ್ನು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾ ಅಧಿಕಾರಿಗಳು ಆಯ್ಕೆ ಮಾಡಿ ಫಲಾನುಭವಿಗಳ ಪಟ್ಟಿಯನ್ನು ಮುಂದಿನ ಕ್ರಮಕ್ಕಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಲ್ಲಿಸುತ್ತಾರೆ.

ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳು ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ಅರ್ಹರಿರುತ್ತಾರೆ.

ಫಲಾನುಭವಿಗಳ ಪಟ್ಟಿಯ ಪ್ರಕಾರ ಸ್ಥಳ ಪರಿಶೀಲಿಸಲು, ಹಾಲಿ ಇರುವ ಎಲ್.ಟಿ. ವಿದ್ಯುತ್ ಮಾರ್ಗದಿಂದ ಸೇವಾ ಮಾರ್ಗವನ್ನು ವಿಸ್ತರಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಆರ್ಥಿಕ ಸ್ಥಿತಿವಂತರೂ ಕೆಲವೆಡೆ ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಸೌಲಭ್ಯ ಪಡೆದಿರುವ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ದೂರುಗಳು ಬಂದಿರುವುದಿಲ್ಲ.

ಈ) 1. ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ.

2. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

3. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಯಮಿತ ಮತ್ತು

4. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಂದ

ಕಳೆದ 3 ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಸೌಲಭ್ಯ ಪಡೆದಿರುವ ಫಲಾನುಭವಿಗಳಿಗೆ ವಿತರಿಸಿರುವ ಪಂಪ್‌ಸೆಟ್‌ಗಳ ವಿವರಗಳು ಈ ಕೆಳಕಂಡಂತಿದೆ.

	ಫಲಾನುಭವಿಗಳ ಸಂಖ್ಯೆ
ಪರಿಶಿಷ್ಟ ಜಾತಿ	18338
ಪರಿಶಿಷ್ಟ ಪಂಗಡ	10655
ಹಿಂದುಳಿದ ವರ್ಗ	23117
ಅಲ್ಪಸಂಖ್ಯಾತರಿಗೆ	2889

ಉ) 1. ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ.

2. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

3. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಯಮಿತ ಮತ್ತು

4. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಂದ

2013–14ರಲ್ಲಿ ವಿರತಿಸಿರುವ ನೀರಾವರಿ ಪಂಪ್‌ಸೆಟ್‌ಗಳ ವಿವರ ಮತ್ತು 2014–15ನೇ ಸಾಲಿಗೆ ಹೊಂದಿರುವ ಗುರಿಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

	2013–14ನೇ ಸಾಲಿನಲ್ಲಿ ಪಂಪ್ ಸೆಟ್ ವಿತರಿಸಿದ ರೈತರ ಸಂಖ್ಯೆ	**2014–15ನೇ ಸಾಲಿನಲ್ಲಿ ಪಂಪ್‌ಸೆಟ್ ವಿತರಿಸಲು ಹೊಂದಿರುವ ಗುರಿ**
ಪರಿಶಿಷ್ಟ ಜಾತಿ	3150	14100
ಪರಿಶಿಷ್ಟ ಪಂಗಡ	2187	4667
ಹಿಂದುಳಿದ ವರ್ಗ	1814	3633
ಅಲ್ಪಸಂಖ್ಯಾತರಿಗೆ	80	1800

ಊ) ಈ ಯೋಜನೆಯ ಸರ್ಕಾರದ ನಿರಂತರ ಯೋಜನೆಗಳಾಗಿದ್ದು, ಇದ ರಿಂದ ಸರ್ಕಾರಕ್ಕೆ ಹೆಚ್ಚುವರಿ ಆರ್ಥಿಕ ಹೊರೆ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನಸಭೆ

3068; ಡಾ. ಸುಧಾಕರ್. ಕೆ. (ಚಿಕ್ಕಬಳ್ಳಾಪುರ)

ಅ) ರೈತರಿಗೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡಲು ಎಷ್ಟು ಮೊತ್ತವನ್ನು ಸಹಾಯಧನ ರೂಪದಲ್ಲಿ